ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 3ನೇ ಸೆಪ್ಟಂಬರ್ 1896.

ಇವರಡಿಕಂಡ ಡಿಪೋಗಳಿಗೆ ಅದಕ್ಕೆ ಎದುರಾಗಿ ಕಾಣಿಸಲ್ಪಟ್ಟ ಜಂಗಲಿಗಳಿಂದ ನಾಟಾಗಳನ್ನು, ಬೆಲಗುಗಳನ್ನು ಮತ್ತು ಕಿರಿಗೆಳುಗಳನ್ನು ಬರುವ 1897ನೇ ಇಸವಿ ಮೇ 31ನೇ ತಾರೀಖು ಒಳಗಾಗಿ ಜಮಾಯಿಸಿ ಕೊಡಲು ಯಿಷ್ಟವುಳ್ಳವರು ಟೆಂಡರ್‌ಯಾನೆ ದರಖಾಸ್ತು ಕೊಡಬಹುದು.

ಡಿಪೋ ಹೆಸರು.	ತರಹೆ.	ಜಮಾಯಿಸಿಕೊಡಬೇಕಾದ ಸಂಖ್ಯೆ.	ಯಾವ ಜಂಗಲಿಯಿಂದ ಜಮಾಯಿಸಿಕೊಡತಕ್ಕದ್ದು ವಗೈರೆ.	ಆಂದಾಜು ಫಾಸಲೆ.
ಲಕ್ಕವಳ್ಳಿ ..	ಮನ್ನಾಜಾತಿ ನಾಟಾ	* 200	ಹೊಸಹಳ್ಳಿ, ಕೋಳಿಗೋಡು ಕರಡಿಮಟ್ಟಿ ಡಿಸ್ಟ್ರಿಕ್ಟ್ ಜಂಗಲಿಗಳಿಂದ ಕೊರವರ ಗುಡ್ಡಿ ಡಿಸ್ಟ್ರಿಕ್ಟ್ ಜಂಗಲ್	7ರ ಲಾಗಾಯತು 10 ಮೈಲಿಗಳು
	ಪೋಖ್ತೆಯಾದ ಹಳೇ ಮರದಿಂದ ಕಾಡುಜಾತಿ	* 100	ಸಾವೆ, ಡಿಸ್ಟ್ರಿಕ್ಟ್ ಜಂಗಲು ನಾವೆ ಸಮೀಪದ ಸ್ಟೇಟ್ ಫಾರೆಸ್ಟ್	11ರ ಲಾಗಾಯತು 13 ಮೈಲಿಗಳು
ತರೀಕೆರೆ ..	ಸಾಗುವಾನಿ ಬೆಲಗು	300 *	ಗಂಟೆನ್ನಾಕನಕಣಿವೆ ಡಿಸ್ಟ್ರಿಕ್ಟ್ ಜಂಗಲ್ ಮತ್ತು ತ್ಯಾಗದ ಬ್ಯಾಗಿ ಡಿಸ್ಟ್ರಿಕ್ಟ್ ಜಂಗಲ್	5ರ ಲಾಗಾಯತು 7 ಮೈಲಿಗಳು
	ಮನ್ನಾಜಾತಿ ನಾಟಾ	50 *		6ರ ಲಾಗಾಯತು 10 ಮೈಲಿಗಳು
	ಕಾಡುಜಾತಿ	25		
	ಕಿರಿಗಳು	30,000 *	ವೆಬ್ಯಾಣಿ ಹಾದಿಕೆರೆ ಜಂಗಲ್	5ರ ಲಾ|| 8 ಮೈಲಿಗಳು.
ಕಡೂರು ..	ಸಾಗುವಾನಿ ಬೆಲಗು	200	ದೊಡ್ಡನ ಗುಡ್ಡದ ಡಿಸ್ಟ್ರಿಕ್ಟ್ ಜಂಗಲ್	10ರ ಲಾಗಾಯತು
	ಕಿರಿಗಳು	5000 *		13 ಮೈಲಿಗಳು
ಚಿಕ್ಕಮಗಳೂರು .	ಜಂಗಲಿ ಬೆಲಗು	300	ಬಾಳೇಹೊನ್ನೂರು ರೋಡು ಕುಂದೂರು ಇಳಿ ಹೊಳೆ ಹಕ್ಕ ಮುಕ್ಕಿ ಡಿಸ್ಟ್ರಿಕ್ಟ್ ಜಂಗಲ್	15ರ ಲಾಗಾಯತು 20 ಮೈಲಿಗಳು
	ಕಿರಿಗಳು	20,000 *		
ಹೆಬ್ಬೆ ಡಿಪೋ ..	ಸಾಗುವಾನಿ ಮತ್ತು ಮನ್ನಾಜಾತಿ (ವಣ ನಾಟಾಗಳು)	200	ಹೆಬ್ಬೆ ಮತ್ತು ತೇಗೂರುಗುಡ್ಡ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಜಂಗಲ್	3ರ ಲಾಗಾಯತು 5 ಮೈಲಿಗಳು

* ಫಾರೆಸ್ಟ್ ಇಲಾಖೆಯಿಂದ ನಿಷ್ಕರ್ಷ ಮಾಡಲ್ಪಟ್ಟವುಗಳು.

2. ಪ್ರತಿ ಯೊಂದು ದರಖಾಸ್ತಿನ ಲಖೋಟೆಯು ಮೇಲೆಯೂ ಇಂಥಾ ಜಂಗಲಿಯಿಂದ ಇಂಥಾ ಡಿಪೋಕ್ಕೆ ತಯ್ಯಾರಿಯಿಂದ ಹೇರಿ ತಂದು ಕೊಡುವ ಬಗ್ಗೆ ದರಖಾಸ್ತು ಯಂದು ಬರದು ರವಾನಿಸತಕ್ಕದ್ದು.

3. ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು 1896ನೇ ಇಸವಿ ಅಕ್ಟೋಬರ್ ತಾರೀಖು 10ರ ವರಿಗೆ ದರಖಾಸ್ತುಗಳನ್ನ ಹಿಡಿಯುತ್ತಾರೆ.

4. ಕಂಟ್ರಾಕ್ಟು ಮಾಡತಕ್ಕವರುಗಳು ಮೇಲೆ ಹೇಳಿದ ಜಂಗಲಿಗಳಿಂದ ಯೊಂದು ಜಂಗಲಿಗಿಂತ ಹೆಚ್ಚಾದ ಜಂಗಲಿಗಳಿಂದ ತಯ್ಯಾರಿ ಯಿಂದ ನಾಟಾಗಳನ್ನು ಮತ್ತು ಬೊಂಬುಗಳನ್ನು ಕಡಿದು ತಯ್ಯಾರಿಯಿಂದ ಯಾವ ಯಾವ ಡಿಪೋಗಳಿಗೆ ರಫ್ತು ಮಾಡುವ ಹಕ್ಕೆ ಆಗುತ್ತೋ ಆದನ್ನ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ನಾಟಾ ಮತ್ತು ಬೊಂಬುಗಳ ತಯ್ಯಾರಿ ಇದುವರಿಗೂ ಡಿಸ್ಟ್ರಿಕ್ಟಿನಲ್ಲಿ ಜಾರಿಯಲ್ಲಿ ಇರುವ ಮಾಮೂಲಿನಂತೆ ಇರಬೇಕು. ಅಲ್ಲದೆ ಫಾರೆಸ್ಟ್ ಇಲಾಖೆಯವರ ಅಪ್ಪಣೆ ಅನುಸರಿಸಿ ಇರಬೇಕು.

5. ನಾಟಾ ಬೆಲಗುಗಳ ವಿಚಾರದಲ್ಲಿ ಸಲೆ ಆಡಿ 1ಕ್ಕೆ ಇಪ್ಪತ್ತರ ಅಂತೆ ಯಂತಲೂ ಗಳುಗಳ ಬಗ್ಗೆ 160ಕ್ಕೆ ಇಪ್ಪತ್ತದಂತೆ ಯಂತಲೂ ನಮೂದಿಸಬೇಕು.

6. ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪ್ರತಿ ವೊಬ್ಬ ಕಂಟ್ರಾಕ್ಟುದಾರನೂ ತಾನು ಕ್ರಮವರಿತ್ತು ಬರದುಕೊಡಬೇಕಾದ ಬಾಂಡುಯಾನೆ ಮುಚ್ಚಳಿಕೆ ಅನುಸರಿಸಿ ಕೆಲಸ ನಡಿಸತಕ್ಕ ಖಾತರಿ ಬಗ್ಗೆ ವೊಂದುನೂರು ರೂಪಾಯಿಗಳನ್ನು ಶೇವಣಿ ಇಡಬೇಕು.

7. ಕೇವಲ ಕಮ್ಮಿ ದರಕ್ಕೆ ಕೊಡುವ ದರಖಾಸ್ತುಗಳನ್ನೇ ಆಗಲಿ ಮತ್ಯಾವ ತರಹೆ ದರಖಾಸ್ತುಗಳನ್ನೇ ಆಗಲಿ ಅಂಗೀಕರಿಸುವದಕ್ಕೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಬದ್ಧರಾಗಿರುವದಿಲ್ಲ. ದರಖಾಸ್ತುಗಳ ಮಂಜೂರಾತಿ ಮೈಸೂರು ಕಮೀಷನರ್ ಫಾರೆಸ್ಟ್ ಕನ್ಸರ್‌ವೇಟರ್ ಸಾಹೆಬರವರ ಮಂಜೂರಿಗೆ ವಳಪಟ್ಟು ಇರುತ್ತೆ.

8. ಮೇಲೆ ಹೇಳಿರುವ ತಫ್ಸೀಲ್‌ಗಳಲ್ಲದೆ ಜಾಸ್ತೀ ಅಂಶಗಳನ್ನು ತಿಳಿಯಬೇಕೆಂದು ಅಪೇಕ್ಷಿಸಿದಲ್ಲಿ ಈ ತಫ್ಸೀಲ್‌ಗಳು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಆಫಿಸನಲ್ಲಿ ದೊರಯುತ್ತೆ.

ಬಿ. ಹೀರಾಶಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.